ಪ್ರಯಾಣ ಮುಖ್ಯವಾಗಿದೆಯೋ ಹೊರತು ಗುರಿಯಲ್ಲ. ಅವರ ಸಂಗೀತ ನಿಜವಾಗಿ ಯಶಸ್ವಿಯಾಗುವುದು ಅವರ 'ಸಂಗೀತ'ವು ಆಗುವ 'ಪ್ರಕ್ರಿಯೆ'ಯಲ್ಲಿ. ಕಿಶೋರಿಯು ಹಾಡುವಾಗ, ಅಥವಾ ಸಾಧನೆ ಮಾಡುವಾಗ ಏನನ್ನೋ ಹುಡುಕುತ್ತಿರುತ್ತಾರೆ ಅನ್ನಿಸುತ್ತಿರುತ್ತದೆ. ಅವರು ಸ್ವರಗಳ ಮೂಲಕ ಏನೋ ಗಂಭೀರವಾದದನ್ನು ಹುಡುಕುತ್ತಿರುತ್ತಾರೆ. ಕೇಳುಗರನ್ನೂ ಜೊತೆಗೆ ಕರೆದೊಯ್ಯುತ್ತಿರುತ್ತಾರೆ. ಹಾಗಾಗಿ ಅವರ ಸಂಗೀತಯಾತ್ರೆಯಲ್ಲಿ ಕೇಳುಗರಲ್ಲೂ ಅಂತಹುದೇ ಭಾವೋತ್ಕಟತೆ ಇರಬೇಕಾಗುತ್ತದೆ. ಅವರು ಆ ಪ್ರಕ್ರಿಯೆಯಲ್ಲಿ ಕೇಳುಗರ ಸಹಕಾರವನ್ನು ಬಯಸುತ್ತಿರುತ್ತಾರೆ. ಅದು ಸಿಗದೇ ಹೋದಾಗ ಸಿಟ್ಟಾಗುತ್ತಾರೆ. ಆಗವರಿಗೆ ಸಣ್ಣಪುಟ್ಟದ್ದೂ ಕಿರಿಕಿರಿಯಾಗುತ್ತದೆ.

ಅವರು ಎಂದೂ ಪ್ರಶಸ್ತಿ, ಪುರಸ್ಕಾರಗಳಿಗೆ ಪ್ರಾಶಸ್ತ್ಯ ಕೊಟ್ಟವರಲ್ಲ. ಭಾರತರತ್ನ ಬರಲಿಲ್ಲ ಅನ್ನುವ ಬೇಸರವಿದೆಯೇ ಅಂದಾಗ, "ಅವೆಲ್ಲಾ ತೀರಾ ಐಹಿಕವಾದದ್ದು, ನನಗೆ ಅದರಲ್ಲಿ ಆಸಕ್ತಿಯಿಲ್ಲ. ಸಂಗೀತದ ಮೂಲಕ ಶಾಂತಿಯನ್ನು ಕಂಡುಕೊಳ್ಳುವುದಕ್ಕೆ ನನಗೆ ಸಾಧ್ಯವಾಗಬೇಕು" ಎಂದಿದ್ದರು. ಜೊತೆಗೆ ಭೀಮಸೇನ ಜೋಷಿಯವರಿಗೆ ಭಾರತರತ್ನ ಬಂದ ಬಗ್ಗೆ ಪ್ರಸ್ತಾಪಿಸುತ್ತಾ, "ಅವರಿಗೆ ಅದು ಬಂದಾಗ ಅವರಿಗೆ ನಾನು ಏನು ಸ್ವೀಕರಿಸುತ್ತಿದ್ದೇನೆ ಅನ್ನುವುದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗದ ಸ್ಥಿತಿಯಲ್ಲಿದ್ದರು. 10ವರ್ಷ ಮೊದಲೂ ಸೊಗಸಾಗಿ ಹಾಡುತ್ತಿದ್ದರು. ಆಗಲೇ ಏಕೆ ಗುರುತಿಸುವುದಕ್ಕೆ ಸಾಧ್ಯವಾಗಲಿಲ್ಲ" ಎಂದಿದ್ದರು. ಅದನ್ನವರು ಉಲ್ಲೇಖಿಸಿದ್ದು ಪ್ರಶಸ್ತಿಯೆಲ್ಲ ಅಷ್ಟು ಮುಖ್ಯವಲ್ಲ ಎಂದು ಹೇಳುವುದಕ್ಕೆ.

ಅವರ ಬಗ್ಗೆ ಹಲವು ವಿವಾದಗಳು ಇವೆ. ಹಲವು ಆಕ್ಷೇಪಗಳೂ ಇವೆ. ಸಿಡುಕಿ ಎನ್ನುತ್ತಾರೆ, ಜಂಭ ಅನ್ನುತ್ತಾರೆ. ಜನರನ್ನು ಕಾಯಿಸುತ್ತಾರೆ ಎನ್ನುವ ಟೀಕೆಯಿದೆ. ಇವೆಲ್ಲವನ್ನೂ ಅರ್ಥಮಾಡಿಕೊಳ್ಳುವ ಮನಸ್ಸಿದ್ದರೆ ಅರ್ಥಮಾಡಿಕೊಳ್ಳಬಹುದು.

ಇತ್ತೀಚೆಗೆ ಒಂದು ಕಾರ್ಯಕ್ರಮ ನೀಡುತ್ತಿದ್ದರು. ಹಾಡುವುದಕ್ಕೆ ತುಂಬಾ ಶ್ರಮವಾಗುತ್ತಿತ್ತು. ತುಂಬಾ ಕೆಮ್ಮುತ್ತಿದ್ದರು. ಪದೇ ಪದೇ ಬಿಸಿ ನೀರು ಕುಡಿಯುತ್ತಿದ್ದರು, "ಈಗ ನನ್ನ ಸಂಗೀತದಲ್ಲಿ ಸಾಧ್ಯವಾಗುತ್ತಿರುವುದು ಹಲವು ವರ್ಷಗಳ ಹಿಂದೆ ಸಾಧ್ಯವಾಗಿರಲಿಲ್ಲ. ಹೆಚ್ಚು ನೀರವತೆ ಇದೆ. ನನ್ನ ಹಾದಿ ನನಗೆ ಗೊತ್ತಾಗಿದೆ, ನನ್ನ ಗುರಿ ಸ್ಪಷ್ಟವಾಗುತ್ತಿದೆ. ಅದನ್ನು ತಲುಪುತ್ತೇನೋ ಇಲ್ಲವೋ ಗೊತ್ತಿಲ್ಲ. ಬದುಕಿರುವವರೆಗೂ ಪ್ರಯತ್ನಿಸುತ್ತಿರುತ್ತೇನೆ" ಎಂದಿದ್ದರು. ಸ್ವರಗಳ ಮೂಲಕ ದೇವರನ್ನು ಕಾಣಬೇಕು ಅಂದುಕೊಂಡು ಸಂಗೀತವನ್ನು ಧ್ಯಾನವಾಗಿ ಭಾವಿಸುತ್ತಾ ಕೊನೆಗೆ ಧ್ಯಾನ ಮಾಡುತ್ತಲೇ ಕೊನೆಯುಸಿರೆಳೆದ ಕಿಶೋರಿ ನಮ್ಮನ್ನು ಬಹುಕಾಲ ಕಾಡುತ್ತಾರೆ; ನಮ್ಮ ಮನಸ್ಸಿನಲ್ಲಿ ಬಹುಕಾಲ ಉಳಿಯುತ್ತಾರೆ.


## ಶೈಲಜಾ ಮತ್ತು ಟಿ.ಎಸ್. ವೇಣುಗೋಪಾಲ್

ಈ ಬರಹಗಾರ ದಂಪತಿ ಕಾಲೇಜು ಅಧ್ಯಾಪಕರು. ವೇಣುಗೋಪಾಲ್ ಸಂಖ್ಯಾಶಾಸ್ತ್ರದ ಅಧ್ಯಾಪಕರಾದರೆ, ಶೈಲಜಾ ಇಂಗ್ಲಿಷ್ ಭಾಷೆಯ ಅಧ್ಯಾಪಕರು. ಇವರಿಬ್ಬರ ಆಸಕ್ತಿಯ ಕ್ಷೇತ್ರ ಸಂಗೀತ, ಅನುವಾದ. ಪ್ರಸ್ತುತ ಮೈಸೂರಿನಲ್ಲಿ ನೆಲೆಸಿರುವ ಅವರು ಸಂಗೀತದ ತಿಳಿವನ್ನು ಹೆಚ್ಚಿಸುವ ಸರಣಿ ಪುಸ್ತಕಗಳನ್ನು 'ರಾಗಾಮಾಲ' ಪ್ರಕಾಶನದಿಂದ ಪ್ರಕಟಿಸುತ್ತಿದ್ದಾರೆ.